ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **1690**

ಸದಸ್ಯರ ಹೆಸರು : ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ: : **19.03.2021**

ಉತ್ತರಿಸುವ ಮಾನ್ಯ ಸಚಿವರು : ಕೃಷಿ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2019-20ನೇ ಸಾಲಿನಲ್ಲಿ ತೋಟಗಾರಿಕೆ ಮತ್ತು ಕೃಷಿ ಇಲಾಖೆಗೆ ಸಂಬಂಧಿಸಿದಂತೆ, ರೈತರು ಹವಾಮಾನ ಆಧಾರಿತ ಫಸಲ್ ಬೀಮಾ ಕಂತು ಭರಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>
ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ
ಹೌದು,
2019-20ನೇ ಸಾಲಿನಲ್ಲಿ ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಸಂದಾಯವಾಗಿರುವ ರೈತರ ವಿಮಾ ಕಂತಿನ ಮೊತ್ತದ ಹಂಗಾಮುವಾರು ವಿವರ ಈ ಕೆಳಕಂಡಂತಿದೆ.
ಮೊತ್ತ ರೂ. ಕೋಟಿಗಳಲ್ಲಿ
<table>
<tr><th>ವರ್ಷ/ ಹಂಗಾಮು</th><th>ರೈತರ ವಿಮಾ ಕಂತು</th></tr>
<tr><td>2019ಮುಂಗಾರು</td><td>133.25</td></tr>
<tr><td>2019-20 ಹಿಂಗಾರು ಮತ್ತು ಬೇಸಿಗೆ</td><td>40.30</td></tr>
<tr><td>ಒಟ್ಟು</td><td>133.55</td></tr>
</table>
Yes,
The details of season wise premium amount received by farmers under Karnataka Raitha Suraksha and Pradhan Mantri Fasal Bima Yojan during 2019-20 is as fallows:
Amount in Rs. Crores
<table>
<tr><th>Year/Season</th><th>Farmer premium</th></tr>
<tr><td>2019 Kharif</td><td>133.25</td></tr>
<tr><td>2019-20 Rabi and Summer</td><td>40.30</td></tr>
<tr><td>ಒಟ್ಟು</td><td>133.55</td></tr>
</table>
</td></tr>
</table>

ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ

2019-20ನೇ ಸಾಲಿನಲ್ಲಿ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಸಂದಾಯವಾಗಿರುವ ರೈತರ ವಿಮಾ ಕಂತಿನ ಮೊತ್ತದ ಹಂಗಾಮುವಾರು ವಿವರ ಈ ಕೆಳಕಂಡಂತಿದೆ.

ಮೊತ್ತ ರೂ. ಕೋಟಿಗಳಲ್ಲಿ

ವರ್ಷ/ ಹಂಗಾಮು	ರೈತರ ವಿಮಾ ಕಂತು
2019ಮುಂಗಾರು	61.35
2019-20 ಹಿಂಗಾರು ಮತ್ತು ಬೇಸಿಗೆ	18.40
ಒಟ್ಟು	**79.75**

The details of season wise premium amount received by farmers under Restructured Weather Based Crop Insurance Scheme during 2019-20 is as follows:

Amount in Rs. Crores

Year/Season	**Farmer premium**
2019 Kharif	61.35
2019-20 Rabi and Summer	18.40
ಒಟ್ಟು	**79.75**

<table>
<tr>
<td>ಆ)</td>
<td>ಕಂದಾಯ ಇಲಾಖೆಯವರು ಮುಂಗಾರಿನಲ್ಲಿ ಬೆಳೆಗಳ ಸರ್ವೆಯನ್ನು ಮಾಡಿಸಿ, ಹಿಂಗಾರಿನಲ್ಲಿ ಸರ್ವೆ ಮಾಡಿಸಬೇಕಾಗಿರುವ ನಿಯಮವಿರುವ ಕುರಿತು ಸರ್ಕಾರಕ್ಕೆ ಮಾಹಿತಿ ಇದೆಯೇ;</td>
<td>ಹೌದು,

ಮುಂಗಾರು ಮತ್ತು ಹಿಂಗಾರಿನ ಎರಡೂ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆ ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ ಮತ್ತು ಈ ಕುರಿತು ಸರ್ಕಾರಕ್ಕೆ ಮಾಹಿತಿ ಇದೆ ಹಾಗೂ ಸರ್ಕಾರದಿಂದ ಆದೇಶವನ್ನು ಸಹ ಹೊರಡಿಸಲಾಗಿರುತ್ತದೆ.

Yes,

It is regarding to conducting crop survey in both Kharif and Rabi season and Government has also been issued in this regards.</td>
</tr>
<tr>
<td>ಇ)</td>
<td>ಸದರಿ ಇಲಾಖೆಯವರು ಮುಂಗಾರಿನಲ್ಲಿ ಸರ್ವೆಯನ್ನು ಮಾಡಿ, ಹಿಂಗಾರಿನಲ್ಲಿ ಸರ್ವೆ ಮಾಡದೇ ಇದ್ದುದರಿಂದ ರೈತರ ಖಾತೆಗೆ ವಿಮೆ ಹಣ ಜಮೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ

ಬೆಳೆ ಸಮೀಕ್ಷೆಯನ್ನು ಮುಂಗಾರು ಹಾಗೂ ಹಿಂಗಾರಿನ ಎರಡೂ ಹಂಗಾಮಿನಲ್ಲೂ ಕೈಗೊಳ್ಳಲಾಗಿರುತ್ತದೆ.

Crop Survey has been conducted both in Kharif and Rabi Seasons.

2019-20ನೇ ಸಾಲಿನಲ್ಲಿ ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ರೈತರಿಗೆ ವಿಮಾ ಸಂಸ್ಥೆಯವರಿಂದ ಒಟ್ಟು ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರದ ಮೊತ್ತ ಹಂಗಾಮುವಾರು ವಿವರ ಈ ಕೆಳಕಂಡಂತಿದೆ.

ಮೊತ್ತ ರೂ. ಕೋಟಿಗಳಲ್ಲಿ
<table>
<tr><th>ವರ್ಷ/ ಹಂಗಾಮು</th><th>ಒಟ್ಟು ಮೊತ್ತ</th></tr>
<tr><td>2019ಮುಂಗಾರು</td><td>560.56</td></tr>
<tr><td>2019-20ಹಿಂಗಾರು ಮತ್ತು ಬೇಸಿಗೆ</td><td>28.13</td></tr>
<tr><td>ಒಟ್ಟು</td><td>588.69</td></tr>
</table>

The details of season wise claims settled by Insurance Companies under Karnataka Raitha Suraksha-Pradhan Mantri Fasal Bima Yojane during 2019-20 is as fallows:

Amount in Rs. Crores
<table>
<tr><th>Year/Season</th><th>Claim amount</th></tr>
<tr><td>2019 Kharif</td><td>560.56</td></tr>
<tr><td>2019-20 Rabi and Summer</td><td>28.13</td></tr>
<tr><td>Total</td><td>588.69</td></tr>
</table>
</td>
</tr>
</table>

		ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಉದ್ಭವಿಸುವುದಿಲ್ಲ. ಮುಂಗಾರು ಮತ್ತು ಹಿಂಗಾರು ಎರಡೂ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. Under Restructured Weather Based Crop Insurance Scheme Doesn't arise. Crop survey has been conducted in both Kharif and Rabi seasons.
ಈ)	ಕಂದಾಯ ಇಲಾಖೆಯ ನಿರ್ಲಕ್ಷ್ಯದಿಂದ ತೊಂದರೆಗೆ ಒಳಗಾದ ರೈತರಿಗೆ ವಿಮೆ ಹಣ ಜಮೆ ಮಾಡಲು ಸರ್ಕಾರಕ್ಕೆ ಬೇಕಾಗಿರುವ ಕಾಲಾವಕಾಶವೆಷ್ಟು?	**ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ** ಬೆಳೆ ಸಮೀಕ್ಷೆಯನ್ನು ಮುಂಗಾರು ಹಾಗೂ ಹಿಂಗಾರಿನ ಎರಡೂ ಹಂಗಾಮಿನಲ್ಲೂ ಕೈಗೊಳ್ಳಲಾಗಿರುತ್ತದೆ ಹಾಗೂ ಯಾವುದೇ ತೊಂದರೆಗಳು ಕಂಡುಬಂದಿರುಸವುದಿಲ್ಲ. ರಾಜ್ಯದಲ್ಲಿ ಮುಂಗಾರು 2019 ಹಾಗೂ 2019-20 ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆಯ ದತ್ತಾಂಶವನ್ನು ನೋಂದಣಿಯಾದ ರೈತರ ಪ್ರಸ್ತಾವನೆಗಳ ದತ್ತಾಂಶದೊಂದಿಗೆ ಸಂರಕ್ಷಣೆ ತಂತ್ರಾಂಶದ ಮುಖಾಂತರ ಇಂಟಗ್ರೇಟ್ ಮಾಡಲಾಗಿರುತ್ತದೆ. ಕೇಂದ್ರ ಸರ್ಕಾರ ನೀಡಿರುವ ಕೆಲವೊಂದು ವಿನಾಯಿತಿಗಳನ್ನು ಅಳವಡಿಸಿ ತಾಳೆಯಾದ ಪ್ರಸ್ತಾವನೆಗಳಿಗೆ ಹಾಗೂ ಬೆಳೆ ಕಟಾವು ಪ್ರಯೋಗಗಳ ವರದಿಯ ಆಧಾರದ ಮೇಲೆ ಅರ್ಹ ಪ್ರಸ್ತಾವನೆಗಳಿಗೆ ಬೆಳೆ ವಿಮೆ ಪರಿಹಾರವನ್ನು ಸಂರಕ್ಷಣೆ ತಂತ್ರಾಂಶದಲ್ಲಿ **initiate** ಮಾಡಲಾಗಿರುತ್ತದೆ. ಅದರಂತೆ ಅನುಷ್ಠಾನ ವಿಮಾ ಸಂಸ್ಥೆಯವರು ರೈತ ಫಲಾನುಭವಿಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. 2019-20 ನೇ ಸಾಲಿನಿಂದ ಎಲ್ಲಾ ಅನುಷ್ಠಾನ ವಿಮಾ ಸಂಸ್ಥೆಯವರಿಂದ ಪ್ರಥಮ ಬಾರಿಗೆ ಸಂರಕ್ಷಣೆ ತಂತ್ರಾಂಶದ ಮುಖಾಂತರ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಬೆಳೆ ವಿಮೆ ಪರಿಹಾರ ಮೊತ್ತವನ್ನು ವರ್ಗಾಯಿಸುವ ಪ್ರಕ್ರಿಯೆಯೂ ಸಹ ಪ್ರಗತಿಯಲ್ಲಿರುತ್ತದೆ. ಈ ವಿಧಾನದಲ್ಲಿ ಅರ್ಹ ಫಲಾನುಭವಿಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವುದರಿಂದ ಪಾರದರ್ಶಕತೆ ಮತ್ತು ನೈಜ ಸಮಯದ ಪಾವತಿಯ ಸ್ಥಿತಿಯು ದೊರಕುತ್ತದೆ. ಈ ಪ್ರಕ್ರಿಯೆಯನ್ನು 2019 ರ ಮುಂಗಾರು ಹಂಗಾಮಿನಲ್ಲಿ ಪ್ರಥಮ ಬಾರಿಗೆ ಅನುಷ್ಠಾನಗೊಳಿಸಲಾಗಿದೆ.

2019-20 ನೇ ಸಾಲಿನಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಅರ್ಹ ಫಲಾನುಭವಿ ರೈತರಿಗೆ ಜಮೆಯಾದ ವಿಮಾ ಪರಿಹಾರ

(ಮೊತ್ತ ರೂ.ಕೋಟಿಗಳಲ್ಲಿ)

ವರ್ಷ/ಹಂಗಾಮು	ಲೆಕ್ಕ ಹಾಕಿರುವ ವಿಮಾ ಪರಿಹಾರ		ವಿಮಾ ಸಂಸ್ಥೆರವರಿಂದ ಇತ್ಯರ್ಥಪಡಿಸಿರುವ ವಿಮಾ ಪರಿಹಾರ		ಬಾಕಿ ಇರುವ ವಿಮಾ ಪರಿಹಾರ	
	ಫಲಾನುಭವಿಗಳ ಸಂಖ್ಯೆ	ಮೊತ್ತ	ಫಲಾನುಭವಿಗಳ ಸಂಖ್ಯೆ	ಮೊತ್ತ	ಫಲಾನುಭವಿಗಳ ಸಂಖ್ಯೆ	ಮೊತ್ತ
2019 ಮುಂಗಾರು	565746	658.34	463921	560.56	101825	97.77
2019-20ರ ಹಿಂಗಾರು & ಬೇಸಿಗೆ	124325	129.06	38832	28.13	85493	100.92

Under Karnataka Raitha Suraksha-Pradhan Mantri Fasal Bima Yojane Crop Survey has been conducted both in Kharif and Rabi Seasons.

In Karnataka State during 2019 Kharif and 2019-20 Rabi and Summer, crop survey data was integrated with the enrolled proposals in the Samrakshane portal. After the integration, the claims were initiated using crop survey data duly applying the principles and exceptions as approved by the State Government and the Government of India for the eligible farmers/matched proposals based on the CCE yield (Crop Cutting Experiments).

Accordingly claims are being settled by Insurance Companies on real time basis through Samrakshane portal. This step ensures transparency

and real time payment status of claims. This process is being implemented for the first time in the State since from 2019 Kharif.

Claims settled by the Insurance Companies under PMFBY during the year 2019-20.

(Amount in Rs. Crores)

Claims settled by the Insurance Companies under PMFBY during the year 2019-20 (Amount in Rs. Crores)						
Year/ Season	**Claims initiated**		**Claims settled**		**Claims pending**	
	No of Beneficiaries	**Claim amount**	**No of Beneficiaries**	**Claim amount**	**No of Beneficiaries**	**Claim amount**
2019 Kharif	565746	658.34	463921	560.56	101825	97.77
2019-20 Rabi and Summer	124325	129.06	38832	28.13	85493	100.92

ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ

ರಾಜ್ಯ ಸರ್ಕಾರವು 2019-20 ರ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಸಂಬಂಧಿಸಿದಂತೆ ನಡೆಸಲಾದ ಬೆಳೆ ಸಮೀಕ್ಷೆ ಮಾಹಿತಿಯನ್ನು ಮರುವಿನ್ಯಾಸಗೊಳಿಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಆಯಾ ಹಂಗಾಮುಗಳಲ್ಲಿ ನೋಂದಣಿಯಾದ ಬೆಳೆ ವಿಮೆ ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ಬೆಳೆ ಹೊಂದಾಣಿಕೆ ಮಾಡಲಾಗಿರುತ್ತದೆ.

ಇದರನ್ವಯ, 2019-20ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಅರ್ಹ ರೈತರಿಗೆ ಸಂಬಂಧಪಟ್ಟ ವಿಮಾ ಸಂಸ್ಥೆಯವರಿಂದ ಒಟ್ಟು ಇತ್ಯರ್ಥಪಡಿಸಿರುವ ಹಂಗಾಮುವಾರು ಬೆಳೆ ವಿಮೆ ಪರಿಹಾರದ ಮೊತ್ತದ ವಿವರ ಈ ಕೆಳಕಂಡಂತಿದೆ.

(ಮೊತ್ತರೂ. ಕೋಟಿಗಳಲ್ಲಿ)

ವರ್ಷ/ ಹಂಗಾಮು	ಒಟ್ಟುಮೊತ್ತ
2019ಮುಂಗಾರು	314.41
2019–20ಹಿಂಗಾರು	179.96
ಒಟ್ಟು	**494.37**

ಫಲಾನುಭವಿಗಳ ಖಾತೆಗೆ ಆಧಾರ್ ಜೋಡಣೆ ಆಗದಿರುವ ಮತ್ತು ಬ್ಯಾಂಕ್ ಸಂಬಂಧಿತ ಕಾರಣಗಳಿಂದ ವಾಪಸ್ಸಾಗಿರುವ ವಿಮಾ ಪರಿಹಾರವನ್ನು ಸಂಬಂಧಪಟ್ಟ ವಿಮಾ ಕಂಪನಿವತಿಗಳ ವತಿಯಿಂದ ಪಾವತಿಸುವ ಕಾರ್ಯ ಪ್ರಗತಿಯಲ್ಲಿದೆ.

Under Restructured Weather Based Crop Insurance Scheme

The state government has conducted crop survey in both Kharif and Rabi seasons during 2019-20 and the data has been integrated with the enrolment data of respective seasons of RWBCIS with approval from Government of India.

As per this, the eligible claim has been settled by the concerned Insurance Companies during 2019-20 and details are as follows:

(Rs.In.Crores)

Year/Season	Claim amount
2019 Kharif	314.41
2019-20 Rabi	179.96
Total	494.37

The claim settlement by the concerned Insurance Companies is under process for the returned cases due to Aadhaar and bank related issues.

ಸಂಖ್ಯೆ: ಕೃಇ/51/ಕೃಕೈಉ/2021

(ಬಿ.ಸಿ.ಪಾಟೀಲ್)
ಕೃಷಿ ಸಚಿವರು